**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ**

**ಸಿ ಸಿ. 176/2020**

**ಸಿಡಬ್ಲೂ. 20 ಪಿಡಬ್ಲೂಃ 15**

| | |
|---|---|
| **ಸಾಕ್ಷಿಯ ಹೆಸರು** | **ಶಿವಕುಮಾರ್ ಹೆಚ್ ಆರ್** |
| **ತಂದೆ ಹೆಸರು** | **ರಾಮಕೃಷ್ಣೇಗೌಡ** |
| **ವಯಸ್ಸು** | **53 ವರ್ಷ** |
| **ಉದ್ಯೋಗ** | **ಪಿ ಐ, ವಿವೇಕ ನಗರ, ಬೆಂಗಳೂರು.** |
| **ವಾಸ** | **ಬೆಂಗಳೂರು** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 06.10.2025**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ನಾನು ಜುಲೈ 2011 ರಿಂದ ಸೆಪ್ಟೆಂಬರ್ 2013 ರವರೆಗೆ ಮೇಟಗಳ್ಳಿ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 14.08.2011 ರಂದು ಬೆಳಿಗ್ಗೆ 9.30 ಗಂಟೆಗೆ ಅರುಳ್ ಬಿನ್ ಸ್ಟಾನಿಸ್ ಲಾಸ್ ರವರು ಮೇಟಗಳ್ಳಿ ಠಾಣೆಗೆ ಬಂದು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 122/2011 ರಡಿಯಲ್ಲಿ ಗುನ್ನೆಯನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಆ ದಿನ ಸ್ವೀಕರಿಸಿದ ದೂರನ್ನು ಈಗ ನೋಡಿ ಗುರ್ತಿಸಿದ್ದು ಅದನ್ನು ನಿಪಿ.11 ಎಂದು, ಸಾಕ್ಷಿಯ ಸಹಿಯನ್ನು ನಿಪಿ.11 ಎ ಎಂದು ಗುರ್ತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.12 ಎಂದು, ಸಾಕ್ಷಿಯ ಸಹಿಯನ್ನು

*ನಿಪಿ.12 ಎ ಎಂದು ಗುರ್ತಿಸಲಾಯಿತು. ನಂತರ ನಮ್ಮ ಠಾಣೆಯ ಪ್ರಕರಣದ ತನಿಖೆಯನ್ನು ನಾನು ಮುಂದುವರಿಸಿರುತ್ತೇನೆ.*

***ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ***

*2. ಪಾಂಡವಪುರ ಪ್ರಕರಣದ ಬಗ್ಗೆ ನಿಮಗೇನು ಗೊತ್ತಿಲ್ಲ ಎಂದರೆ ಸರಿಯಲ್ಲ. ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ.ಪಾಂಡವಪುರ.***